# ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅಂಕೋಲಾ

**ಸಿಸಿ ನಂಬರ 299/2024**

| | |
|---|---|
| ಆರೋಪಿಯ ಹೆಸರುಃ | ರಾಘವೇಂದ್ರ ಗಣಪತಿ ನಾಯಕ |
| ವಯಸ್ಸುಃ | 41 ವರ್ಷ |
| ಉದ್ಯೋಗ | ವ್ಯವಹಾರ |
| ವಿಳಾಸಃ | ಸಾಃ ಬೆಳಸೆ, ತಾಃ ಅಂಕೋಲಾ |

## ಪ್ರಕ್ರಿಯಾ ಸಂಹಿತೆ ಕಲಂ 313 ರೀತ್ಯಾ ಆರೋಪಿಯ ಹೇಳಿಕೆ

ಪ್ರ 1: ನೀನು ಅಭಿಯೋಜನೆಯ ಪರ ಹಾಜರುಪಡಿಸಿರುವ ಸಾಕ್ಷಿಗಳ ಹೇಳಿಕೆ ಕೇಳಿದ್ದಿಯಾ?

ಉತ್ತರಃ

ಪ್ರ 2: ಫಿರ್ಯಾದಿ ಅಮೃತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಶಾಃ ಅಂಕೋಲಾ ಇದರ ವಸೂಲಾತಿ ಅಧಿಕಾರಿ ಪಿಡಬ್ಲ್ಯೂ 1 : ಶ್ರೀ ಹೇಮಂತ ನಾರಾಯಣ ಗೌಡ, ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕಃ 16-04-2021 ರಂದು ಆರೋಪಿ ಫಿರ್ಯಾದಿ ಸಂಸ್ಥೆಯಿಂದ ವ್ಯವಹಾರದ ಸಲುವಾಗಿ ರೂ. 50,000/- ಸಾಲವನ್ನು ಪಡೆದಿದ್ದು ಇರುತ್ತದೆ . ಸದ್ರಿ ಸಾಲಕ್ಕೆ ಆರೋಪಿ ವ, ಜಾಮಿನುದಾರು ಒಪ್ಪಿ ಎಲ್ಲಾ ಸಾಲ ಪತ್ರಗಳಿಗೆ ಮತ್ತು ಕರಾರಿಗೆ ಮತ್ತು ಜಾಮೀನು ಪತ್ರಕ್ಕೆ ಸಹಿ ಮಾಡಿಕೊಟ್ಟಿದ್ದು, ಸದರಿ ಸಾಲದ ಕರಾರುಗಳ ಪ್ರಕಾರ ಆರೋಪಿ ವ, ಜಾಮಿನುದಾರರು ಸಾಲದ ಹಣವನ್ನು ಮರುಪಾವತಿ ಮಾಡಿಸುವಷ್ಟು ಹಣ ಇದೆ ಎಂದು ನಂಬಿಸಿ ರೂ. 83,252/- ಹಣ ತುಂಬುವುದು ಬಾಕಿ ಇದ್ದಾಗ, ಆರೋಪಿತನು ದಿನಾಂಕಃ 15-04-2024 ರಂದು ತಾನು

ಕರ್ನಾಟಕ ಬ್ಯಾಂಕ್ ಲಿಮಿಟೆಡ್ , ಶಾಖೆಃ ಬೊಬ್ರುವಾಡಾ , ತಾಃ ಅಂಕೋಲಾ ರವರಲ್ಲಿ ಹಣದ ಉಳಿತಾಯ ಖಾತೆ ಅಡಿಯಲ್ಲಿ ಚೆಕ್ ನಂಬರ 374875 ನ್ನು ರೂ. 83,252/–ಕ್ಕೆ ನೀಡಿರುತ್ತಾನೆ. ಸದರಿ ಆರೋಪಿ ನೀಡಿದ ಚೆಕ್ಕು ಖಾತೆಯಲ್ಲಿ **“Funds Insufficient”** ಎಂದು ಹಿಂಬರಹದೊಂದಿಗೆ ಪರತ್ ಬಂದಿರುತ್ತದೆ. ಈ ಕುರಿತಾಗಿ ಆರೋಪಿತನಿಗೆ ಮುಂಚಿತವಾಗಿ ನೋಟೀಸು ನೀಡಿದರೂ ಸಹ ಹಣ ಮರು ಪಾವತಿಸದೇ ಎನ್ ಐ ಆ್ಯಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ 3: ಈ ಪ್ರಕರಣದಲ್ಲಿ ಮತ್ತೇನಾದರೂ ಹೇಳುವುದಿದೆಯಾ?

ಉತ್ತರಃ

ಪ್ರ 4: ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತೀರಾ ಹಾಗೂ ಏನಾದರೂ ಕಾಗದ ಪತ್ರವನ್ನು ಹಾಜರುಪಡಿಸುತ್ತೀರಾ ?

ಉತ್ತರಃ

( ಆರೋಪಿಗೆ ಮೇಲಿನ ಪ್ರಶ್ನೆಗಳನ್ನು ಆತನಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

Sd/-

ದಿನಾಂಕಃ 10-03-2025.

**( ಅರ್ಪಿತಾ ಬಿ. ಬೆಲ್ಲದ)**

**ಹೆ, ಪ್ರ ದ ನ್ಯಾದಂ, ಅಂಕೋಲಾ.**